O.S.No. 207/2007 P W - 1

ದಿನಾಂಕ 08.06.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ. ವಕೀಲರಿಂದ ಃ

ನನ್ನ ತಾತನ ಹೆಸರು ನಂಜೇಗೌಡ. ನಮ್ಮ ತಾತನಿಗೆ ಇಬ್ಬರು ಗಂಡು ಮಕ್ಕಳು. ಅವರ ಹೆಸರು ಹೊನ್ನೇಗೌಡ, ನಂಜ @ ಭೋವಿ. ನಾನು ಎರಡನೇ ನಂಜ @ ಭೋವಿ ರವರ ಮಗ ಎಂದರೆ ಸರಿ. ನಮ್ಮ ಹೊನ್ನೇಗೌಡ ರವರ ಮಗ ಶಿವನಂಜಪ್ಪ ಎಂದರೆ ಸರಿ. ಪ್ರತಿವಾದಿಯವರ ಗಂಡನ ತಂದೆಯ ಹೆಸರು ತಿಮ್ಮಯ್ಯ ಬಿನ್ ದಾಸ ಎಂದರೆ ಸರಿ. ಪ್ರತಿವಾದಿಯ ಗಂಡ ವೆಂಕಟಾಚಲ ಎಂದರೆ ಸರಿ. ದಿನಾಂಕ 11.09.1933 ರಲ್ಲಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ 2 ಎಕರೆ 20 ಗುಂಟೆ ಜಮೀನನ್ನು ಪ್ರತಿವಾದಿಯವರ ಗಂಡನ ತಂದೆಗೆ ಮಾರಾಟ ಮಾಡಿರುತ್ತಾರೆ

ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಸರ್ವೆ ನಂ. 80 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 81/3 ಎಂಬುವುದು ಕೈ ತಪ್ಪಿ 80 ಎಂದು ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 24.06.1950 ರಲ್ಲಿ ಸರ್ವೆ ನಂ. 81 ರಲ್ಲಿ 27 ಗುಂಟೆ ಯನ್ನು ನಮ್ಮ ತಂದೆ ಪ್ರತಿವಾದಿಯವರ ಮಾವನಿಗೆ ಮಾರಾಟ ಮಾಡಿದ್ದಾರೇ ಎಂದರೆ ಸರಿ. ಸರ್ವೆ ನಂ. 80 ರಲ್ಲಿ 2 ಎಕರೆ 20 ಗುಂಟೆ ಮತ್ತು ಸರ್ವೆ ನಂ. 81 ರಲ್ಲಿ 27 ಗುಂಟೆ ಕ್ರಯದ ಪ್ರಕಾರ ಪ್ರತಿವಾದಿಯವರ ಮಾವನ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎಸಿ ನ್ಯಾಯಾಲಯದ ಮುಂದೆ ಎರಡು ಎಕರೆ 20 ಗುಂಟೆ ನಮಗೆ ಆಗಿರುತ್ತದೆ 27 ಗುಂಟೆ ಪ್ರತಿವಾದಿಯವರಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಜಿಲ್ಲಾ ಧಿಕಾರಿಗಳ ನ್ಯಾಯಾಲಯದಲ್ಲಿ 3 ಎಕರೆ 7 ಗುಂಟೆ ಪ್ರತಿವಾದಿಯವರಿಗೆ ಆದೇಶ ಆಗಿರುತ್ತದೆ ಎಂದರೆ ಸರಿ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಆದ ಆದೇಶವನ್ನು ಪ್ರಶ್ನಿಸಿ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಗೌರವಾನ್ವಿತ ಉಚ್ಚ ನ್ಯಾಯಾಲಯವು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿಕೊಳ್ಳಲು ನಿರ್ದೇಶಿಸಿರುತ್ತದೆ. 25.01.1943 ರಲ್ಲಿ ಸೂಪರ್ಡೆಂಟ್ ಆಫ್ ಸರ್ವೆ ಎಲ್ಲವನ್ನು ಪರಿಶೀಲನೆ ಮಾಡಿ ಸರ್ವೆ ನಂ. 81 ಎಂದು Certificate ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಶವೆ ನಂ. 81/3 ರಲ್ಲಿ 3 ಎಕರೆ 7 ಗುಂಟೆ ವಿಸ್ತೀರ್ಣ ದಲ್ಲಿ ಪ್ರತಿವಾದಿಗಳ ಮಾವ ಅವರ ನಂತರ ಪ್ರತಿವಾದಿಗಳ ಗಂಡ ಪ್ರತಿವಾದಿಯವರು ನಿರಂತರವಾಗಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಸರ್ವೇ ನಂ. 81/3 ರ ಚಕ್ಕುಬಂಧಿ ಪೂರ್ವಕ್ಕೆ ಭೀಮನಾಯಕ ನ ಆಸ್ತಿ, ಸಾಕ್ಷಿಯು ಮುಂದುವರೆದು ಹೊತ್ತು ಉಡುವ ಕಡೆ ಪ್ರತಿವಾದಿಗಳ ಉಳಿಕೆ ಜಮೀನು ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಭೀಮನಾಯಕ ನ ಆಸ್ತಿ, ಉತ್ತರಕ್ಕೆ ಹೊಂಬಾಳಯ್ಯ ಮತ್ತು ದಕ್ಷಿಣಕ್ಕೆ ವೆಂಕಟಣ್ಣನವರ ಜಮೀನು ಇದೆ ಎಂದರೆ ಸರಿ. ಸದರಿ ಚಕ್ಕುಬಂಧಿಯಲ್ಲಿ ಮರಿಯಮ್ಮ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ

ನಂಜ ಉರುಫ್ ಭೋಗಿ ಗೌಡ ಮರಣ ಹೊಂದಿ 50 ವರ್ಷವಾಯಿತು. ನಮ್ಮ ತಂದೆಗೆ ನಂಜಪ್ಪ ಮತ್ತು ಹೊನ್ನೇಗೌಡ ಎಂಬ ಇಬ್ಬರು ಮಕ್ಕಳು. ನಮ್ಮ ತಂದೆ ಮರಣ ಹೊಂದಿದ ನಂತರ ಪಿತ್ರಾರ್ಜಿ ಆಸ್ತಿಗಳು ನನನ ಮತ್ತು ನನ್ನ ಅಣ್ಣನ ಹೆಸರಿಗೆ ಜಂಟಿ ಖಾತೆ ಆಗಿ ಪಹಣಿ ಸಹ ಬಂದಿರುತ್ತದೆ ಎಂದರೆ ಸರಿ. ನಾವು ವಿಭಾಗ ಮಾಡಿಕೊಂಡಾಗ ದಾವಾ ಸ್ವತ್ತನ್ನು ಸೇರಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ ದೊಡ್ಡಪ್ಪನ ಮಗ ಶಿವನಂಜಪ್ಪ ಎಂದರೆ ಸರಿ. ಶಿವನಂಜಪ್ಪ ಅಸಲು ದಾವಾ ಸಂಖ್ಯೆ 12/2009 ಎಂದು ಪ್ರತಿವಾದಿಗಳ ವಿರುದ್ಧ ಸಿವಿಲ್ ನ್ಯಾಯಾಲಯ ಕನಕಪುರದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶಿವನಂಜಪ್ಪ ಮತ್ತು ಪ್ರತಿವಾದಿಯು ಸದರಿ ದಾವೆಯನ್ನು ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಜೀ ಪ್ರಕಾರ ಸರ್ವೆ ನಂ. 81/3 ರಲ್ಲಿ ಒಟ್ಟು 3 ಎಕರೆ 7 ಗುಂಟೆ ಪ್ರತಿವಾದಿಯವರ ಮಾಲೀಕತ್ವಕ್ಕೆ ಸೇರಿದ್ದು ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ನಮ್ಮ ತಾತನಿಗೆ ಸೇರಿದ್ದು ಎಂದರೆ ಸರಿ. ಸಾಕ್ಷಿ ಮುಂದುವರೆದು ಪೋಡಿ ಪ್ರಕಾರ ನಮ್ಮ ದೊಡ್ಡಪ್ಪನಿಗೆ 5 ನೇ ಪೋಡಿ ನಮಗೆ 3 ನೇ ಪೋಡಿ ಎಂದು ನುಡಿಯುತ್ತಾರೆ. ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಪ್ರತಿವಾದಿಗಳ ಮಾವನಿಗೆ ಮಾರಾಟ ಮಾಡಿರುವುದರಿಂದ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಓ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ